**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 2078/2022**

**ಚಾ.ಸಾ.** 3

**ಪ್ರಾ.ಸಾ.** 2

**ದಿನಾಂಕಃ 07.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ರವೀಂದ್ರ ದೈವಜ್ಞ |
| ತಂದೆಃ ಗಂಡನ ಹೆಸರು | ನಾಗೇಶ |
| ಉದ್ಯೋಗ | ವ್ಯಾಪಾರ |
| ವಯಸ್ಸು | 55 |
| ವಾಸಸ್ಥಳ | ಕಲಘಟಗಿ |

**ಪ್ರಾರಂಭ ಸಮಯಃ 12.31 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಸಾಕ್ಷಿಗೆ ನಿಪಿ1 ರಿಂದ 3 ನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ1(ಬಿ), ನಿಪಿ2(ಬಿ) ಮತ್ತು ನಿಪಿ3(ಬಿ)ಎಂದು ಗುರುತಿಸಲಾಯಿತು. ನಿಪಿ1 ರಿಂದ 3 ಕ್ಕೆ ನಾನು ತಡಸ ಕ್ರಾಸ ಬಳಿ ರಸ್ತೆ ಅಪಘಾತಕ್ಕೆ ಸಂಬಂಧಿಸಿದಂತೆ ನಡೆದಂತಹ ಪಂಚನಾಮೆ ಸಲುವಾಗಿ ನಾನು ಸುಮಾರು 1 ವರುಷಗಳ ಹಿಂದೆ ಸಹಿಗಳನ್ನು ಮಾಡಿರುತ್ತೇನೆ. ಸದರಿ ಸಮಯದಲ್ಲಿ ಪ್ರಾಸಾ.1 ರವರು ಮತ್ತು ಪೊಲೀಸರು ಸ್ಥಳದಲ್ಲಿದ್ದರು.

ನನ್ನ ಮತ್ತು ಪ್ರಾಸಾ1 ರವರ ಸಮಕ್ಷಮ ನಿಪಿ1 ಮತ್ತು 3 ರಂತೆ ಪಂಚನಾಮೆಗಳನ್ನು ಜರುಗಿಸಿ ನಿಪಿ2 ರಂತೇ ಹಾಥ ನಕಾಶೆಯನ್ನು ತಯಾರಿಸಿರುತ್ತಾರೆ. ಸಾಕ್ಷಿಗೆ ನಿಪಿ4 ಮತ್ತು 5 ನ್ನು ತೋರಿಸಲಾಗಿ

ಅದನ್ನು ನೋಡಿ ಗುರುತಿಸಿದರು. ನಿಪಿ4 ಮತ್ತು 5 ನ್ನು ಅಪಘಾತವಾದ ಸ್ಥಳದಲ್ಲಿ ಪೊಲೀಸರು ತೆಗೆದರು. ಪಂಚನಾಮೆ ಮಾಡಿದ ನಂತರ ಪೊಲೀಸರು ನನ್ನ ಸಹಿಗಳನ್ನು ಪಡೆದುಕೊಂಡರು. ನನ್ನ ಸಮಕ್ಷಮ ಪೊಲೀಸರು ಯಾವುದೇ ವಾಹನವನ್ನು ಅಮಾನತುಪಡಿಸಿಕೊಂಡಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ನಿಪಿ1 ನ್ನು ಘಟನಾ ಸ್ಥಳದಲ್ಲಿ ಜರುಗಿಸಿದ ನಂತರ ನನ್ನನ್ನು ಮತ್ತು ಪ್ರಾಸಾ1 ರವರನ್ನು ಪೊಲೀಸರು ಅದೇ ದಿನ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದರು ಅಂದರೆ ಸರಿಯಲ್ಲ. ನನ್ನೊಂದಿಗೆ ಪ್ರಾಸಾ1 ರವರು ಸಹ ಪೊಲೀಸ್ ಠಾಣೆಗೆ ಬಂದರು ಅಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಚಾಸಾ.1 ರವರು ಹಾಜರಿದ್ದು, ಅಪಘಾತ ಪಡಿಸಿದ ವಾಹನವನ್ನು ತೋರಿಸಿದರು ಅಂದರೆ ಸರಿಯಲ್ಲ. ಸದರಿ ವಾಹನವನ್ನು ನಮ್ಮ ಸಮಕ್ಷಮ ನಿಪಿ3 ರಂತೆ ಪೊಲೀಸರು ಪಂಚನಾಮೆ ಜರುಗಿಸಿ ಸದರಿ ವಾಹನವನ್ನು ವಶಪಡಿಸಿಕೊಂಡರು ಅಂದರೆ ಸರಿಯಲ್ಲ. ನಿಪಿ3 ರಲ್ಲಿರುವ ಅಂಶಗಳನ್ನು ನನಗೆ ಒದಿ ಹೇಳಿ ಸಹಿ ಪಡೆದುಕೊಂಡರು ಅಂದರೆ ಸರಿಯಲ್ಲ. ಅಪಾದಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದ**

ಪೊಲೀಸರು ನನಗೆ ಲಿಖಿತವಾಗಿ ನೋಟಿಸು ಕೊಟ್ಟಿಲ್ಲ. ಪಂಚನಾಮೆಗೆ ಸಂಬಂಧಿಸಿದಂತೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಅಂದರೆ ಸರಿ. ಪಂಚನಾಮೆ ಬರೆಯಲು ನಾನು ಯಾವುದೇ ಮಾಹಿತಿ ಕೊಟ್ಟಿಲ್ಲ ಅಂದರೆ ಸರಿ. ಘಟನಾ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ ಅಂದರೆ ಸರಿ. ಪೊಲೀಸರು ಸೂಚಿಸಿದ ಮೇರೆಗೆ ನಾನು ನಿಪಿ1 ರಿಂದ 3 ಕ್ಕೆ ಸಹಿ ಮಾಡಿದೆ ಅಂದರೆ ಸರಿ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 2078/2022**

**ಚಾ.ಸಾ.** 2

**ಪ್ರಾ.ಸಾ.** 1

**ದಿನಾಂಕಃ 07.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ವಿಜಯವಾಡೇಕರ |
| ತಂದೆಃ ಗಂಡನ ಹೆಸರು | ಸುರೇಶ |
| ಉದ್ಯೋಗ | ವ್ಯಾಪಾರ |
| ವಯಸ್ಸು | 43 |
| ವಾಸಸ್ಥಳ | ಕಲಘಟಗಿ |

**ಪ್ರಾರಂಭ ಸಮಯಃ 12.18 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಸಾಕ್ಷಿಗೆ ದಿಃ19.06.2022ರ ಅಪಘಾತಸ್ಥಳ ಪಂಚನಾಮೆ, ಹಾಥ ನಕಾಶೆ ಮತ್ತು ವಾಹನತಡೆ ಪಂಚನಾಮೆಯನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ1 ರಿಂದ 3 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1(ಎ), ನಿಪಿ2(ಎ) ಮತ್ತು ನಿಪಿ3(ಎ)ಎಂದು ಗುರುತಿಸಲಾಯಿತು. ನಿಪಿ1 ರಿಂದ 3ಕ್ಕೆ ನಾನು ತಡಸ ಕ್ರಾಸ ಬಳಿ ರಸ್ತೆ ಅಪಘಾತಕ್ಕೆ ಸಂಬಂಧಿಸಿದಂತೆ ನಡೆದಂತಹ ಪಂಚನಾಮೆ ಸಲುವಾಗಿ ನಾನು ಸುಮಾರು 1 ವರುಷಗಳ ಹಿಂದೆ ಸಹಿಗಳನ್ನು ಮಾಡಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ.3 ಮತ್ತು ಪೊಲೀಸರು ಸ್ಥಳದಲ್ಲಿದ್ದರು.

ನನ್ನ ಮತ್ತು ಚಾಸಾ.3 ರವರ ಸಮಕ್ಷಮ ನಿಪಿ1 ಮತ್ತು 3 ರಂತೆ ಪಂಚನಾಮೆಗಳನ್ನು ಜರುಗಿಸಿ ನಿಪಿ2 ರಂತೇ ಹಾಥ ನಕಾಶೆಯನ್ನು ತಯಾರಿಸಿರುತ್ತಾರೆ. ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ4 ಮತ್ತು 5 ಎಂದುಗುರುತಿಸಲಾಯಿತು. ನಿಪಿ4 ಮತ್ತು 5 ನ್ನು ಅಪಘಾತವಾದ ಸ್ಥಳದಲ್ಲಿ ಪೊಲೀಸರು ತೆಗೆದರು. ಪಂಚನಾಮೆ ಮಾಡಿದ ನಂತರ ಪೊಲೀಸರು ನನ್ನ ಸಹಿಗಳನ್ನು ಪಡೆದುಕೊಂಡರು.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ನಿಪಿ1 ನ್ನು ಘಟನಾ ಸ್ಥಳದಲ್ಲಿ ಜರುಗಿಸಿದ ನಂತರ ನನ್ನನ್ನು ಮತ್ತು ಚಾಸಾ.3 ರವರನ್ನು ಪೊಲೀಸರು ಅದೇ ದಿನ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದರು ಅಂದರೆ ಸರಿ. ನನ್ನೊಂದಿಗೆ ಚಾಸಾಾ.3 ರರವರು ಸಹ ಪೊಲೀಸ್ ಠಾಣೆಗೆ ಬಂದರು ಅಂದರೆ ಸರಿ. ಸದರಿ ಸಮಯದಲ್ಲಿ ಚಾಸಾ.1 ರವರು ಹಾಜರಿದ್ದು, ಅಪಘಾತ ಪಡಿಸಿದ ವಾಹನವನ್ನು ತೋರಿಸಿದರು ಅಂದರೆ ಸರಿಯಲ್ಲ. ಸದರಿ ವಾಹನವನ್ನು ನಮ್ಮ ಸಮಕ್ಷಮ ನಿಪಿ3 ರಂತೆ ಪೊಲೀಸರು ಪಂಚನಾಮೆ ಜರುಗಿಸಿ ಸದರಿ ವಾಹನವನ್ನು ವಶಪಡಿಸಿಕೊಂಡರು ಅಂದರೆ ಸರಿಯಲ್ಲ. ನಿಪಿ3 ರಲ್ಲಿರುವ ಅಂಶಗಳನ್ನು ನನಗೆ ಓದಿ ಹೇಳಿ ಸಹಿ ಪಡೆದುಕೊಂಡರು ಅಂದರೆ ಸರಿಯಲ್ಲ. ಅಪಾದಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದ**

ಪೊಲೀಸರು ನನಗೆ ಲಿಖಿತವಾಗಿ ನೋಟಿಸು ಕೊಟ್ಟಿಲ್ಲ. ಪಂಚನಾಮೆಗೆ ಸಂಬಂಧಿಸಿದಂತೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಅಂದರೆ ಸರಿ. ಪಂಚನಾಮೆ ಬರೆಯಲು ನಾನು ಯಾವುದೇ ಮಾಹಿತಿ ಕೊಟ್ಟಿಲ್ಲ ಅಂದರೆ ಸರಿ. ಘಟನಾ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ ಅಂದರೆ ಸರಿ. ಪೊಲೀಸರು ಸೂಚಿಸಿದ ಮೇರೆಗೆ ನಾನು ನಿಪಿ1 ರಿಂದ 3 ಕ್ಕೆ ಸಹಿ ಮಾಡಿದೆ ಅಂದರೆ ಸರಿ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**